ಶ್ರೀ ಎಂ. ಮಹದೇವ್ :— ಮಾನ್ಯ ವಿರೋಧಪಕ್ಷದ ನಾಯಕರು ವ್ಯಕ್ತಪಡಿಸಿದ ನನ್ನ ಮೇಲಿನ ಅನುಮಾನವನ್ನು ಅವರು ಹಿಂತೆಗೆದುಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಆದೇಶವೇನಿದೆ ಅದನ್ನು ನಾವು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆ. ಶೇಕಡಾ 75ರಷ್ಟು ಕೈಮಗ್ಗ ನೇಕಾರರಿಗೆ ಮತ್ತು ಶೇಕಡ 25 ರಷ್ಟು ವಿದ್ಯುತ್ ಮಗ್ಗ ನೇಕಾರರಿಗೆ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಅದರಂತೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಹುಣಸೂರು ಪಟ್ಟಣದಲ್ಲಿ ಒಳಚರಂಡಿ ಯೋಜನೆ.

469(4497) ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ಪಟ್ಟಣದಲ್ಲಿ 2.5 ಕೋಟಿ ವೆಚ್ಚದಲ್ಲಿ ಒಳಚರಂಡಿ ಯೋಜನೆ ಕೆಲಸ ಪೂರ್ಣವಾಗಿದ್ದು ಅದು ಕಾರ್ಯಗತಗೊಳ್ಳದೆ ಒಳಚರಂಡಿಯೊಳಗೆ ಕಸ ಕಲ್ಮಶಗಳು ತುಂಬಿಕೊಂಡು ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇಲ್ಲಿಯವರೆಗೆ ಒಳಚರಂಡಿಗೆ ಸಂಪರ್ಕ ಕೊಡದಿರಲು ಕಾರಣವೇನು? ಒಳಚರಂಡಿಯನ್ನು ಸಂಪೂರ್ಣ ಸಂಪರ್ಕ ಕಾರ್ಯಗತಗೊಳಿಸಲು ಎಷ್ಟು ಸಮಯಬೇಕು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ) ಹೌದು.

ಆ) ಈ ಯೋಜನೆಯಡಿಯಲ್ಲಿ ಗ್ರಾಮಸಾರ ಶೇಖರಣಾ ವ್ಯವಸ್ಥೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು1985ರಲ್ಲಿ ಪೂರ್ಣಗೊಳಿಸಿ ಹುಣಸೂರು ಪುರಸಭೆಯ ವಶಕ್ಕೆ ನೀಡಲಾಗಿದೆ. ಹಾಳು ಗುಂಡಿಗಳಿಗೆ ಅಳವಡಿಸಿದ್ದ ಬೀಡು ಕಬ್ಬಿಣದ ಮುಚ್ಚಳಗಳನ್ನು ಕೆಲವು ಪ್ರದೇಶಗಳಲ್ಲಿ ದುಷ್ಕರ್ಮಿಗಳು ಕದ್ದು ಹೋಗಿರುವುದರಿಂದ ಕಸ ಕಲ್ಮಶಗು ಮಳೆ ನೀರಿನ ಜೊತೆಗೂಡಿ ಹಾಳು ಗುಂಡಿಗಳ ಮೂಲಕ ಕೊಳವೆಗಳಲ್ಲಿ ಸೇರಿ ಕೊಳವೆ ಮಾರ್ಗಗಳು ನಿಷ್ಕ್ರಿಯವಾಗಿವೆ ಒಳ ಚರಂಡಿ ವ್ಯವಸ್ಥೆ ಸಂಪರ್ಕಗಳನ್ನು ಹುಣಸೂರು ಪುರಸಭೆಯು ನೀಡುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಈ ವ್ಯವಸ್ಥೆಯನ್ನುಸರಿಪಡಿಸಿ ಗೃಹ ಸಂಪರ್ಕಗಳನ್ನು ನೀಡಲು ಹುಣಸೂರು ಪುರಸಭೆಗೆ ಸೂಚನೆ ನೀಡಲಾಗಿದೆ.

ಶ್ರೀ ವಿ. ಪಾಪಣ್ಣ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದಲ್ಲಿ ಸುಮಾರು 2.5 ಕೋಟಿ ರೂಪಾಯಿಗಳ ವೆಚ್ಚದಲ್ಲಿ 1985ರಲ್ಲಿಯೇ ಒಳಚರಂಡಿ

ಯೋಜನೆಯನ್ನು ಪೂರ್ಣಮಾಡಿ ಅದನ್ನು ಪುರಸಭೆಗೆ ವಹಿಸಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಕಸ, ಕಲ್ಮಶಗಳು ತುಂಬಿಕೊಂಡು ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಉತ್ತರದಲ್ಲಿ 'ಹೌದು' ಎಂದು ಹೇಳಿದ್ದಾರೆ. ಆದರೆ ಒಳಚರಂಡಿ ವ್ಯವಸ್ಥೆಯನ್ನು ಗೃಹ ಸಂಪರ್ಕಕ್ಕೆ ಅನುಕೂಲವಾಗುವ ಹಾಗೆ ಕೊಟ್ಟಿಲ್ಲ. ಒಳಚರಂಡಿಯಲ್ಲಿ ಕಸ ಕಲ್ಮಶಗಳು ಸೇರಿ ನಿಷ್ಕ್ರಿಯವಾಗಿರುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಆದರೆ ಈ ಕೆಲಸವಾಗದೆ, ಕೇವಲ ಪುರಸಭೆಗೆ ಯೋಜನೆ ವಹಿಸಿರುವುದಕ್ಕೆ ಇಲಾಖೆಯವರು ಪತ್ರವನ್ನು ಬರೆದಿದ್ದಾರೆ. ಆದರೆ ಈ ವ್ಯವಸ್ಥೆಯನ್ನು ಸರಿಪಡಿಸಿ ಗೃಹ ಸಂಪರ್ಕಗಳನ್ನು ನೀಡಲು ಹುಣಸೂರು ಪುರಸಭೆಗೆ ಸೂಚಿಸಿದ್ದೇವೆಂದು ಹೇಳಿದ್ದಾರೆ. ಈಗ ಒಳಚರಂಡಿ ಮಂಡಳಿಯವರಿಗೆ ಹಾಗೂ ಪುರಸಭೆಯವರ ಮಧ್ಯೆ ಸಹಮತವಿಲ್ಲವಾಗಿದೆ. 15 ವರ್ಷಗಳಿಂದ ಸಾರ್ವಜನಿಕರು ಒಳಚರಂಡಿ ವ್ಯವಸ್ಥೆ ಗೃಹಸಂಪರ್ಕಕ್ಕೆ ಇಲ್ಲದೆ ವಂಚಿತರಾಗಿದ್ದಾರೆ. ಇಂದು ಕಲ್ಮಶವೆಲ್ಲ ಬೀದಿಯಲ್ಲಿಯೇ ಹೋಗುತ್ತಿದೆ. ಇದಕ್ಕೆ ಸರ್ಕಾರ ಕಾರಣ ಕಾರಣವೋ, ಪುರಸಬೆಯವರು ಕಾರಣವೋ ಅಥವಾ ಒಳಚರಂಡಿ ಮಂಡಳಿ ಕಾರಣವೋ ಎಂಬುದನ್ನು ತಿಳಿದು, ಯೋಜನೆ ನಿಷ್ಕ್ರಿಯವಾಗಿರುವುದಕ್ಕೆ ಕ್ರಮ ತೆಗೆದುಕೊಳ್ಳದಿರುವುದು ಸರಿಯೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

11.30 ಎ.ಎಂ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಹುಣಸೂರು ಪಟ್ಟಣಕ್ಕೆ ಈಗಾಗಲೇ ನಾವು ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆ ಯೋಜನೆಯನ್ನು ಕೂಡ ಈಗಾಗಲೇ ನಾವು ಕಾರ್ಯಗತಗೊಳಿಸಿ ಅಲ್ಲಿರತಕ್ಕಂಥ ಸ್ಥಳೀಯ ಸಂಸ್ಥೆಗಳಿಗೆ ವಹಿಸಿಕೊಟ್ಟಿದ್ದೇವೆ. ಆದರೆ ಆ ಸ್ಥಳೀಯ ಸಂಸ್ಥೆಯವರು ಅದರ ನಿರ್ವಹಣೆ ಮಾಡಬೇಕಾಗುತ್ತದೆ. ಆದರೆ ಬಹಳ ವರ್ಷಗಳು ಬಿಟ್ಟರೆ ಎಲ್ಲಾ ಕೊಳವೆ ಮಾರ್ಗಗಳು ಮುಚ್ಚಿಹೋಗಿಬಿಡುತ್ತವೆ ಹಾಗೂ ಮ್ಯಾನ್ ಹೋಲ್ ಕೂಡ ತೊಂದರೆ ಆಗಿ ಇನ್ನು ಹತ್ತು ವರ್ಷಗಳು ಬಿಟ್ಟರೆ ನೀವು ಹೇಳಿದ ಹಾಗೆ ಆಗುತ್ತದೆ. ಆದುದರಿಂದ ಪುರಸಭೆಯಿಂದ ಆಗತಕ್ಕಂಥ ಕೆಲಸಗಳನ್ನು ತಾವು ಹೇಳಿದ ಮೇಲೆ, ನಾನೂ ಕೂಡ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಅಲ್ಲಿ ಮಾಡಿರತಕ್ಕಂಥ ಯೋಜನೆ ಸಂಪೂರ್ಣವಾಗಿ ಕಾರ್ಯಗತವಾಗಬೇಕು ಹಾಗೂ ಆ ಯೋಜನೆಯಿಂದ ಸಾರ್ವಜನಿಕರಿಗೆ ಹೆಚ್ಚು ಅನುಕೂಲವಾಗಬೇಕೆಂದು ನಾನು ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ.

ಶ್ರೀ ವಿ. ಪಾಪಣ್ಣ :— ಮಾನ್ಯ ಅಧ್ಯಕ್ಷರೆ, ಆ ಕಾರ್ಯಕ್ರಮಗಳನ್ನು ತುರ್ತಾಗಿ ಹಾಕಿಕೊಳ್ಳಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಪುರಸಭೆಯವರು ಬಹಳ ತಾತ್ಸಾರ ಮನೋಭಾವದವರಿದ್ದಾರೆ. ಏಕೆಂದರೆ ಒಳಚರಂಡಿ ಮಂಡಲಿಯವರು ಪಟ್ಟಣದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಪುರಸಭೆಯವರು ನಮ್ಮನ್ನು ಕೇಳದೆ ಅವರು ಕೆಲಸ ಮಾಡುತ್ತಾರೆಂದು ಹೇಳುತ್ತಾರೆ. ಅವರು ಪುರಸಭೆಯವರನ್ನು ಏಕೆ ಕೇಳುತ್ತಾರೆ? ಟೆಂಡರ್ ಕರೆಯುತ್ತಾರೆ, ಟೆಂಡರ್ ಬಂದಮೇಲೆ ಕೆಲಸ ಮಾಡುತ್ತಾರೆ.

ಚೆನ್ನಾಗಿ ಕೆಲಸವಾಗಿದೆ. ಒಳಚರಂಡಿ ಮಂಡಳಿಯವರು ಪುರಸಭೆಯವರಿಗೆ ಗೃಹಸಂಪರ್ಕ ಕೊಡಿ ಎಂದು ಕೇಳಿದರೆ ನೀವು ನಮಗೆ ಕೆಲಸ ಮಾಡುವುದರ ಬಗ್ಗೆ ಕೇಳಲಿಲ್ಲ, ಆದ್ದರಿಂದ ನಾವು ನಿಮ್ಮ ಜೊತೆ ಸಹಕರಿಸುವುದಿಲ್ಲವೆಂದು ಉಡಾಫೆ ಉತ್ತರ ಕೊಡುತ್ತಾರೆ. ಅದಕ್ಕೆ ಅವರು ಪುರಸಭೆಯವರಿಗೆ ಅದನ್ನು ಲಿಖಿತ ಮೂಲಕ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಚೀಫ್ ಆಫಿಸರ್ ಸರ್ಕಾರದ ಪರವಾಗಿ ಇರುವಂತಹ ಅಧಿಕಾರಿ; ಅವರನ್ನು ಕರೆಯಿಸಿ ಸರ್ಕಾರ ಮತ್ತು ಒಳಚರಂಡಿ ಮಂಡಳಿ ನೇರವಾಗಿ ಸಾರ್ವಜನಿಕರಿಗೆ ಆಗುವಂತಹ ಅನಾನುಕೂಲವನ್ನು ಸರಿಪಡಿಸಬೇಕು ಹಾಗೂ ಆದಷ್ಟು ಬೇಗ ಆ ಕೆಲಸವನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಅಲ್ಲಿರತಕ್ಕಂಥ ಸಮಸ್ಯೆಯ ಅರಿವು ನನಗೆ ಇರುವುದರಿಂದ ಎಂಟತ್ತು ಲಕ್ಷ ರೂಪಾಯಿಗಳಷ್ಟು ನಮ್ಮ ಬೋರ್ಡಿಗೆ ಖರ್ಚಾದರೂ ಪರವಾಗಿಲ್ಲ, ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವ ಹಾಗೆ ನಾನು ಅದನ್ನು ಮಾಡಿಸಿಕೊಡುತ್ತೇನೆ.

ವಿಶೇಷ ಘಟಕ ಯೋಜನೆ ಹಾಗೂ ಗಿರಿಜನರ ಉಪಯೋಜನೆಗೆ ನೀಡುವ ಅನುದಾನದ ಬಗ್ಗೆ ವಿವರ ನೀಡುವುದು.

470 (4508) ಶ್ರೀ ಎಂ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ವಿಶೇಷ ಘಟಕ ಯೋಜನೆಗೆ ಹಾಗೂ ಗಿರಿಜನ ಉಪಯೋಜನೆಗೆ 1999-2000 ಹಾಗೂ 2000-2001ನೇ ಸಾಲಿನ ಆಯವ್ಯಯದಲ್ಲಿ ಇಲಾಖಾವಾರು ನಿಗಧಿಗೊಳಿಸಲಾಗಿರುವ ಅನುದಾನ ಎಷ್ಟು; ತಿಳಿಸುವುದು?

ಆ) ರಾಜ್ಯದಲ್ಲಿ ಯಾವುದಾದರೂ ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಗೆ ನಿಗದಿಗೊಳಿಸಲಾಗಿರುವ ಅನುದಾನವನ್ನು ಖರ್ಚು ಮಾಡದೇ ಇರುವಂತಹ ಜಿಲ್ಲೆಗಳೇನಾದರೂ ಇದೆಯೇ; ಹಾಗಿದಲ್ಲಿ, ಅಂತಹ ಜಿಲ್ಲೆಗಳು ಯಾವುವು?

ಶ್ರೀ ಹಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ) ರಾಜ್ಯದಲ್ಲಿ ವಿಶೇಷ ಯೋಜನೆಯಡಿಯಲ್ಲಿ 1999-2000 ಮತ್ತು 2000-2001ನೇ ಸಾಲಿನ ಆಯವ್ಯಯದಲ್ಲಿ ಇಲಾಖಾವಾರು ನಿಗದಿಗೊಳಿಸಿದ ಹಣದ ವಿವರವನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಗಿರಿಜನ ಉಪಯೋಜನೆಗೆ ಸಂಬಂಧಿಸಿದ ವಿವರವನ್ನು ಅನುಬಂಧ - 2ರಲ್ಲಿ ನೀಡಲಾಗಿದೆ.

ಆ) -ಇಲ್ಲ-